## ಕಳೆದ ಸಂಚಿಕೆಯಲ್ಲಿ



ಕೇರಳದಿಂದ ಕೀನ್ಯಾದ ಮೋಂಬ್ಸಾಸಾಕ್ಕೆ ನೆಲೆ ಬದಲಾವಣೆಯಾದ ನಂತರ ನ್ಯಾನ್ಸಿಯ ಬದುಕಿನಲ್ಲಿ ಹೊಸ ವಸಂತ ಇಣುಕತೊಡಗಿತು. ಆ ಸಂಭ್ರಮ ತುಂಬಾ ಕಾಲ ಉಳಿಯಲಿಲ್ಲ. ಅಬ್ರಹಾಮ್‌ನ ಹಳೆಯ ಚಾಳಿ ಮರುಕಳಿಸಿತು. ಹೊಸ ದೇಶದಲ್ಲಿ, ಹೊಸ ಅಧಿಕಾರದಲ್ಲಿ ಅವನ ಹೆಣ್ಣುಬಾಕತನ ವಿಜೃಂಭಿಸತೊಡಗಿತು. ಪತ್ನಿಯ ವಿರೋಧವನ್ನು ಲೆಕ್ಕಿಸದೆ ಅವನು ಹೊಸ ಹೊಸ ಬೇಟೆಗಳಲ್ಲಿ ಮೈಮರೆಯುತ್ತಿದ್ದ. ನಾನು ಇರುವುದೇ ಹೀಗೆ, ನನ್ನನ್ನು ಇರುವಂತೆಯೇ ಒಪ್ಪಿಕೋ ಎನ್ನುವಂತೆ ವರ್ತಿಸತೊಡಗಿದ ಗಂಡನ ನಡವಳಿಕೆ ನ್ಯಾನ್ಸಿಯನ್ನು ಕಂಗಾಲಾಗಿಸಿತು. ಅದೇ ಸಮಯದಲ್ಲಿ ಮೌರೀನ್ ಎನ್ನುವ ಹಿರಿಯ ಮಹಿಳೆಯೊಬ್ಬರ ಸ್ನೇಹ ನ್ಯಾನ್ಸಿಗೆ ಕೊಂಚ ಮಟ್ಟಿಗೆ ಸಾಂತ್ವನ ನೀಡತೊಡಗಿತು. ಮಸಾಜಿಸ್ಟ್ ಆಗಿದ್ದ ಮೌರೀನ್, ನ್ಯಾನ್ಸಿಯ ದೈಹಿಕ ಬಾಧೆಗಳ ಜೊತೆಗೆ ಮಾನಸಿಕ ಒತ್ತಡಗಳಿಗೂ ಸಲಹೆ ನೀಡತೊಡಗಿದರು. ಬಿಸಿತುಪ್ಪದಂತೆ ಪರಿಣಮಿಸಿದ ಗಂಡನೊಂದಿಗೆ ಏಗುತ್ತಿರುವಾಗಲೇ ನ್ಯಾನ್ಸಿಗೆ ಮತ್ತೊಂದು ಆಘಾತ ಎದುರಾಯಿತು; ತಮ್ಮ ನೀಲ್‌ನ ಅನಾರೋಗ್ಯದ ಸುದ್ದಿಯ ಮೂಲಕ.

ಏನೋ, ಅವನು ತನ್ನ ಚರ್ಚ್‌ನಲ್ಲಿ ನೀಲ್‌ಗೆ ಶೋಕಸಭೆಯೊಂದನ್ನು ಏರ್ಪಡಿಸಿದ. ಬಹಳಷ್ಟು ಜನ ಕಲೆತರು. ನೀಲ್‌ನ ದೊಡ್ಡ ಫೋಟೊವನ್ನು ಚರ್ಚಿನ ಮಧ್ಯದಲ್ಲಿಡಲಾಯಿತು. ಹೂವುಗಳ ಶೃಂಗಾರ ಹೇಗಿತ್ತೆಂದರೆ, ನನ್ನ ಶೋಕದ ಮನಸ್ಸು ಸಹ ಅತ್ತ ಕಡೆಗೆ ಹರಿಯಿತು. ಕಾಯರ್ ಗುಂಪಿನವರು ಮಧುರ ಭಜನೆಗಳನ್ನು ಪ್ರಸ್ತುತಪಡಿಸಿದರು; ಮೃತನ ಆತ್ಮಶಾಂತಿಗಾಗಿ ಸಾಮೂಹಿಕ ಪ್ರಾರ್ಥನೆಯನ್ನು ಮಾಡಲಾಯಿತು. ಎಲ್ಲರೂ ಮೇಣದ ಬತ್ತಿಗಳನ್ನು ಹೊತ್ತಿಸಿ ನೀಲ್‌ಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದರು.

ಅಬ್ರಾಹಮ್ ತನ್ನ ಭಾಷಣದಲ್ಲಿ ಹೇಳಿದ – 'ಸಾವು ಶಾಶ್ವತ ಸತ್ಯ. ಮನುಷ್ಯನ ಉತ್ತಮ ಕೆಲಸಗಳು ಅವನನ್ನು ಸದಾ ಜೀವಂತವಾಗಿಡುತ್ತವೆ. ನನ್ನ ಪತ್ನಿಯ ಅವಳಿ ಸಹೋದರ, ನನ್ನ ಮಾವನ ಮನೆಯ ಅತ್ಯಂತ ಪ್ರೀತಿಯ ವ್ಯಕ್ತಿ, ನನ್ನ ಪರಮ ಮಿತ್ರ, ನಾನು ನಂಬಲರ್ಹನಾಗಿದ್ದ ವ್ಯಕ್ತಿ ನೀಲ್ ಕೋಶಿ ಮ್ಯಾಥ್ಯೂ ಇನ್ನಿಲ್ಲ. ಆದರೆ ಅವರು ತಮ್ಮ ಒಳ್ಳೆಯ ಕೆಲಸಗಳಿಂದಾಗಿ ಸದಾ ನೆನಪಿನಲ್ಲಿರುತ್ತಾರೆ. ನೀಲ್ ಕೋಶಿ ಮ್ಯಾಥ್ಯೂ ತುಂಬಾ ಪ್ರಾಮಾಣಿಕರಾಗಿದ್ದರು. ಅವರು ಅಕಾಲದಲ್ಲಿ, ಅಕಸ್ಮಾತ್ ಈ ಜಗತ್ತನ್ನು ತ್ಯಜಿಸಿ ಹೋಗಿದ್ದು, ನನಗೆ ಮತ್ತು ನನ್ನ ಪರಿವಾರಕ್ಕೆ ತುಂಬಲಾರದ ನಷ್ಟವಾಗಿದೆ. ಒಂದು ಬಲವಾದ ಕಂಬ ಬಿದ್ದುಹೋಯಿತು. ನನಗೆ ವಿಶೇಷವಾದ ದುಃಖ ನನ್ನ ಪುತ್ರ ಜೋಶುಆ ಬಗ್ಗೆ ಇದೆ, ಏಕೆಂದರೆ ಅವನಿಗೆ ಅಂಥ ಮಾವ ಎಂದೂ ಸಿಗಲಾರ...' ಭಾಷಣ ಮಾಡುವಾಗ ಅಬ್ರಾಹಮ್‌ನ ಕಂಠ ಒತ್ತಿ ಬಂತು. ಅವನು ರೋದಿಸಿದ... ನೆರೆದಿದ್ದ ಜನ ಸಹ ನಿಟ್ಟುಸಿರು ಬಿಟ್ಟರು. ಕೆಲವರು ಬಿಕ್ಕಳಿಸಿದರು.

ಅಬ್ರಾಹಮ್ ನನ್ನ ಅಥವಾ ನನ್ನ ಪರಿವಾರದ ಸದಸ್ಯರಿಗೆ ಏನೇ ಒಳಿತನ್ನು ಮಾಡಿದರೂ, ಅದು ಅವನ ವ್ಯಭಿಚಾರವನ್ನು ಕ್ಷಮಿಸಲಾರದು. ನಿಜ ಹೇಳಬೇಕೆಂದರೆ, ನನ್ನ ಮನಸ್ಸು ಅವನ ಬಗ್ಗೆ ತುಂಬಾ ಕಹಿಯಾಗಿತ್ತು. ಮನಸ್ಸು ಜಿಗುಪ್ಸೆಯಿಂದ ಬಡಬಡಿಸುತ್ತಿತ್ತು. ಅವನು ಚರ್ಚ್‌ಗೆ ಪಾದರಿಯಾಗಿ ಬಂದು ನಿಂತಾಗ, ಸರಮನ್ ಕೊಡುವಾಗ, ಜನ ಅವನನ್ನು ಫಾದರ್ ಎಂದು ಕರೆದಾಗ, ನನ್ನೊಳಗಿನ ಅಗ್ನಿ ಪ್ರಜ್ವಲಿಸುತ್ತಿತ್ತು. ಕೂಗಿ–ಕಿರುಚಿ ಅವನ ಸತ್ಯವನ್ನು ಬಯಲು ಮಾಡಲು ಮನಸ್ಸಾಗುತ್ತಿತ್ತು; ಅವನ ಅಸಲಿ ರೂಪ ಹೇಳಲು ನಾನು ಹಾತೊರೆಯುತ್ತಿದ್ದೆ. ಆದರೆ ನನ್ನ ಅಸಹಾಯಕತೆ, ನಾನು ಮೌನ ವಹಿಸುತ್ತಿದ್ದೆ. ನನ್ನ ಮಗ ಜೋಶುಆ ನೆನಪಾಗುತ್ತಿದ್ದ. ಅಬ್ರಾಹಮ್ ನನ್ನ ಮಗನ ತಂದೆಯಾಗಿದ್ದ. ನಾನು ಅವನ ತಂದೆಯನ್ನು ಎಲ್ಲರೆದುರು ಬಹಿರಂಗವಾಗಿ ಅವಮಾನಿಸಲು ಬಯಸುತ್ತಿರಲಿಲ್ಲ. ಆದರೆ ನಾನು ನನ್ನ ಮನಸ್ಸಿನಲ್ಲಿ ಒಂದು ತೀರ್ಮಾನವನ್ನು ಮಾಡಿದ್ದೆ.

'ಅಬ್ರಾಹಮ್‌ನನ್ನು ಬಿಟ್ಟು ಹೋಗಲು?'

ಹೌದು ಪಾಲ್, ನೀವು ಸರಿಯಾಗಿ ಯೋಚಿಸಿದಿರಿ. ನೀಲ್ ಸದಾ ನನಗೆ, ನಾನು ಅಬ್ರಾಹಮ್‌ನನ್ನು ತ್ಯಜಿಸುವಂತೆ ಹೇಳುತ್ತಿದ್ದ. ಈ ವಿಷಯವನ್ನು ನಾನು ದುಃಖದ ಕ್ಷಣಗಳಲ್ಲಿ ಮೌರೀನರೊಂದಿಗೂ ಹೇಳಿದೆ. ನೀಲ್ ಬರೆದ ಟಿಪ್ಪಣಿ ನನಗೆ ಅಮೂಲ್ಯ ನಿಧಿಯಾಗಿತ್ತು; ಇದನ್ನು ನಾನು ಮೌರೀನರಿಗೆ ತೋರಿಸಿದೆ. ಟಿಪ್ಪಣಿಯಲ್ಲಿ, 'ಜೀವನ ತುಂಬಾ ಚಿಕ್ಕದು. ನಾಳೆಗೆ ಎಂದೂ ಮುಂದೂಡಬೇಡ. ಮಾಡಬೇಕೆಂದಿರುವುದನ್ನು ತಕ್ಷಣ ಮಾಡು' ಎಂದು ಬರೆಯಲಾಗಿತ್ತು. ವಿವಾಹದ ಬಂಧನವನ್ನು ಉಳಿಸಿಕೋ ಎಂದು ಸದಾ ನನಗೆ ಸಲಹೆ ನೀಡುತ್ತಿದ್ದ ಮೌರೀನ್ ಸಹ, 'ಇಂಥ ಧೂರ್ತ ಪತಿಯನ್ನು ತ್ಯಜಿಸಬೇಕು, ನೀನಿನ್ನೂ ಯುವತಿ, ಹೊಸ ಮಾರ್ಗವನ್ನು ಹುಡುಕಿಕೋ' ಎಂದು ಹೇಳಿದರು.

ಸುಮಾರು ಎಂಟು ವರ್ಷಗಳ ನಂತರ ನಾನೊಂದು ತೀರ್ಮಾನಕ್ಕೆ ಬಂದೆ. ಇನ್ನು ಸಹಿಸಲಾಗದು. ಇಂಥ ಅಧರ್ಮಿ ಪತಿಯನ್ನು ನನ್ನ ವಶದಲ್ಲಿಟ್ಟುಕೊಳ್ಳುವ ಬದಲು, ನನ್ನ ಶಕ್ತಿ ಮತ್ತು ಸಮಯವನ್ನು ಬೇರೆಡೆಗೆ ತೊಡಗಿಸಬೇಕು ಎಂದು ಯೋಚಿಸಿ ಬೇರೆ ವಿಕಲ್ಪವನ್ನು ಹುಡುಕಲಾರಂಭಿಸಿದೆ. ನನ್ನ ಸಾಮಾಜಿಕ ಪರಿಧಿಯನ್ನು ಇನ್ನಷ್ಟು ವಿಸ್ತರಿಸಿದೆ. ಮೋಂಬ್ಸಾಸಾದ ವೈಟ್ ಇಂಟರ್‌ನ್ಯಾಷನಲ್ ಕಮ್ಯೂನಿಟಿಯ ಜನರೊಂದಿಗೆ ಗೆಳೆತನವನ್ನು ಹೆಚ್ಚಿಸಿಕೊಂಡೆ. ಇಂಡಿಯನ್ಸ್ ಎಲ್ಲಿಯಾದರೂ ವಾಸಿಸಲು ಹೋಗಲಿ, ಆದರೆ ಅವರು ಸಂಕೀರ್ಣವಾಗಿ ಯೋಚಿಸುತ್ತಾರೆ. ಬಿಳಿಯರು ಸ್ವಲ್ಪ ತೆರೆದ ಮನಸ್ಸಿನವರು. ಇವರ ನಡುವೆಯೇ ನನಗೆ ಹೊಸ ಮಾರ್ಗ ಲಭಿಸುವುದು... ನಾನು ನನ್ನ ಉಡುಪಿನ ಬಗ್ಗೆ ಹೆಚ್ಚು ಕಾಳಜಿ ವಹಿಸಿದೆ. ನನ್ನ ನೀಳ ಕೇಶವನ್ನು ಕತ್ತರಿಸಿ, ಚಿಕ್ಕದು ಮಾಡಿಕೊಂಡು ಅದಕ್ಕೆ ಹೊಸದೊಂದು ರೂಪ ಕೊಟ್ಟೆ. ಸ್ಕರ್ಟ್ ಮತ್ತು ಆಧುನಿಕ ಉಡುಪುಗಳನ್ನು ಧರಿಸಲಾರಂಭಿಸಿದೆ. ನನ್ನಲ್ಲಾದ ಬದಲಾವಣೆಯನ್ನು ಅಬ್ರಾಹಮ್ ಸಹ ಮನಗಂಡ. ನನ್ನನ್ನು ತೀಕ್ಷ್ಣವಾಗಿ ನೋಡುತ್ತಾ, 'ಏನ್ ಸಮಾಚಾರ, ತಮ್ಮನನ್ನು ಹೂತ ನಂತರ ನೀನು ಬದಲಾಗಿದ್ದೀಯ, ಇನ್ನಷ್ಟು ಸ್ವತಂತ್ರವಾಗುತ್ತಿದ್ದೀಯ' ಎಂದು ವ್ಯಂಗ್ಯವಾಡಿದ.

ನಾನು ಅವನಿಗೆ, 'ಜೀವನ ತುಂಬಾ ಚಿಕ್ಕದು. ಇದನ್ನು ನೀಲ್‌ನೇ ನನಗೆ ಬರೆದು ಕೊಟ್ಟಿದ್ದ' ಎಂದೆ. ಅಲ್ಲದೆ ನೀಲ್ ಬರೆದ ಟಿಪ್ಪಣಿಯನ್ನು ಅಬ್ರಾಹಮ್‌ಗೆ ತೋರಿಸಿದೆ. ಅಬ್ರಾಹಮ್ ಮೌನವಹಿಸಿದ.

ಸರಿ, ನಾನು ನನ್ನ ಅಸ್ತಿತ್ವ ಮತ್ತು ಹೊಸ ಮಾರ್ಗವನ್ನು ಅರಸಲು ನನ್ನ ಹೆಜ್ಜೆಗಳನ್ನು ಮುಂದಿಟ್ಟೆ. ಬಿಳಿಯರೊಂದಿಗೆ ಕಾಲ ಕಳೆಯಲಾರಂಭಿಸಿದೆ. ಅವರ ಪಾರ್ಟಿಗಳಿಗೆ ಹೋದೆ. ಬಹಳಷ್ಟು ಬಿಳಿಯರು ಮಿತ್ರರಾದರು, ಕೆಲವರೊಂದಿಗೆ ಪ್ರೀತಿಯೂ ಉಂಟಾಯಿತು. ಕಡೆಗೆ ಒಂದು ಪಾರ್ಟಿಯಲ್ಲಿ ಅವನ ಭೇಟಿಯಾಯಿತು.

'ಯಾರು?'

'ಲಾರ್ಸ್ ಹೈನಸನ್ ಎಂಬ ಡ್ಯಾನಿಶ್ ವ್ಯಕ್ತಿ. ಅವನು ನನ್ನ ಹೃದಯದ ಬಾಗಿಲನ್ನು ತಟ್ಟಿದ, ನನ್ನ ಬಗ್ಗೆ ಆಸಕ್ತಿಯನ್ನು ವ್ಯಕ್ತಪಡಿಸಿದ. ನಾನು ಅವನೆಡೆಗೆ ಹಾರಿದೆ. ಕೈಕುಲುಕಿದಾಗ, ನನ್ನ ಕೈಯನ್ನು ಪ್ರೀತಿಯಿಂದ ಒತ್ತಿದ. ಅವನು ನನ್ನ ಬಗ್ಗೆ ಆಕರ್ಷಿತನಾಗಿದ್ದಾನೆಂದು ಅರ್ಥ ಮಾಡಿಕೊಂಡೆ. ಸ್ಕ್ಯಾಂಡಿನೇವಿಯನ್ ದೇಶಗಳ ಜನ ಉದ್ದನೆಯ ನಿಲುವನ್ನು ಹೊಂದಿರುತ್ತಾರೆ. ಆದರೆ ಲಾರ್ಸ್ ಗಿಡ್ಡ ನಿಲುವಿನ ಅಂದರೆ ಸುಮಾರು ಐದು ಅಡಿ, ನಾಲ್ಕು ಇಂಚಿನ, ಸಣಕಲು ವ್ಯಕ್ತಿಯಾಗಿದ್ದ. ಅವನು ಸುವರ್ಣ ವರ್ಣದ ತೆಳು ಮೀಸೆಯನ್ನು ಬಿಟ್ಟಿದ್ದ. ಅವನ ಮತ್ತು ನನ್ನ ಎತ್ತರ ಸಮನಾಗಿತ್ತು. ನನಗೆ ಶ್ರೀಮಂತನಾದ ಅಥವಾ ತುಂಬಾ ಸುಂದರನಾದ ವ್ಯಕ್ತಿ ಬೇಕಿರಲಿಲ್ಲ; ಪ್ರಾಮಾಣಿಕನಾದ, ನನ್ನ ಮುಖದಲ್ಲಿ ಮುಗುಳ್ನಗೆ ತರುವಂಥ, ನನಗೆ ಶಾಂತಿಯನ್ನು ಕೊಡುವಂಥ ವ್ಯಕ್ತಿ ನನಗೆ ಬೇಕಿತ್ತು.

ಆರಂಭದಲ್ಲಿ ಅವನೊಂದಿಗೆ 'ಹಾಯ್, ಹಲೋ' ಮತ್ತು ಸಣ್ಣಪುಟ್ಟ ಮಾತುಕತೆ ನಡೆಯಿತು, ನಂತರ ಇದು ಹೆಚ್ಚಿತು. ಅವನಿಗೆ ನನ್ನ ಬಗ್ಗೆ ಹೇಳಿದೆ: ನಾನು ಮೂಲದಲ್ಲಿ ಭಾರತದ ಕೇರಳದವಳು. ಮೋಂಬ್ಸಾಸಾಕ್ಕೆ ಬಂದು ಆರು ವರ್ಷಗಳಾದವು. ಇಲ್ಲಿಯ ಒಂದು ಇಂಟರ್‌ನ್ಯಾಷನಲ್ ಚರ್ಚ್‌ನಲ್ಲಿ ನನ್ನ ಪತಿ ಪಾಸ್ಟರ್ ಆಗಿದ್ದಾರೆ. ನಾನು ಸಹ ಇಲ್ಲಿಯ ಒಂದು ಇಂಟರ್‌ನ್ಯಾಷನಲ್ ಶಾಲೆಯಲ್ಲಿ